◆ **ಒಬ್ಬ ಆಧುನಿಕ ಕಾಲದ ಪಾಶ್ಚಾತ್ಯ ಹುಡುಗಿಯಾಗಿ ನಿಮಗೆ 'ತಂತ್ರ'ದಂತಹ ಪ್ರಾಚೀನ ಶೈವ ಆಚರಣೆ ಯಾಕೆ ಮುಖ್ಯ ಅನಿಸಿತು?**

ಪಶ್ಚಿಮದವರು ನಾವು ಅನೇಕ ವರ್ಷಗಳಿಂದ ಹಠಯೋಗವನ್ನು ಅಭ್ಯಾಸ ಮಾಡುತ್ತಿದ್ದೇವೆ. ಇತ್ತೀಚೆಗೆ, ಕುಂಡಲಿನಿ ಯೋಗ ಅಥವಾ ಕಾಶ್ಮೀರಿ ಅದ್ವೈತದಂತಹ ಅನೇಕ ಯೋಗ ಕೋರ್ಸ್‌ಗಳನ್ನು ಸಹ ಪ್ರಾರಂಭಿಸಲಾಗಿದೆ. ಡೇನಿಯಲ್ ಒಡಿಯರ್ ಮತ್ತು ಎರಿಕ್ ಬ್ಯಾರೆಟ್ ಎಂಬ ಇಬ್ಬರು ಫ್ರೆಂಚ್ ಅಭ್ಯಾಸಿಗಳು ಇದರ ಹಿಂದಿದ್ದಾರೆ. ಯೋಗ, ಧ್ಯಾನ, ಮಂತ್ರ, ಯಂತ್ರಗಳನ್ನೂ ಮೀರಿ ತಂತ್ರವು ಇವೆಲ್ಲಕ್ಕಿಂತ ಹೆಚ್ಚು ಎಂಬ ನಂಬಿಕೆ ನನ್ನದು. ತಂತ್ರವು ಜೀವನ ಶೈಲಿಯನ್ನು ರೂಪಿಸಿಕೊಳ್ಳಬಹುದಾದ ರೀತಿಯಾಗಿದೆ. ಇದು ಜಗತ್ತನ್ನು ಇನ್ನೂ ವಾಸ್ತವಿಕ ನೆಲೆಯಲ್ಲಿ ನೋಡುವ ದೃಷ್ಟಿಯಾಗಿದೆ. ತಂತ್ರವು ಕೆಲವು ಹಳೆಯ ಕೆಥೋಲಿಕ್ ನಂಬಿಕೆಗಳನ್ನು ಮೀರಿ ಮುಂದಕ್ಕೆ ಸಾಗಲು ಸಹಾಯ ಮಾಡುತ್ತದೆ. ಶಿವ-ಶಕ್ತಿಯ ಸಮ್ಮಿಲನ,ಶಕ್ತಿ ಶಿವನಿಗಿಂತಲೂ ಒಂದು ಕೈ ಮೇಲು ಎಂಬ ಮಾತು ಬರುತ್ತಲ್ಲ, ಅದು ನನಗೆ ಫೆಮಿನಿಸಂಗಿಂತಲೂ ಗಹನವಾದ ವಿಚಾರ ಅನಿಸ್ತು! ತೀರಾ ಲೌಕಿಕವಾದ ಇಂದಿನ ಕೊಳ್ಳುಬಾಕ ಪ್ರಪಂಚದಲ್ಲಿ ಪವಿತ್ರತೆಯ ಅರ್ಥವನ್ನು ಅದು ಮರಳಿ ತರುತ್ತದೆ. ಕಳೆದ ಶತಮಾನದಲ್ಲಿ 'God is dead' ಎಂಬ ನುಡಿಗಟ್ಟು ಪಶ್ಚಿಮದಲ್ಲಿ ಹೆಚ್ಚು ಗಮನ ಸೆಳೆಯಲು ಆರಂಭಿಸಿತು. ಪಾಶ್ಚಿಮಾತ್ಯರು ಧರ್ಮ ಮತ್ತು ಆಧ್ಯಾತ್ಮಿಕತೆಯ ನೊಗದಿಂದ ಮುಕ್ತವಾಗಿ, ಜೀವನವನ್ನು ನಡೆಸಬಹುದು ಎಂದು ನಂಬಲಾರಂಭಿಸಿದರು. ಆದರೆ ಇದು ವಿಶ್ವದ ಅಪವಿತ್ರೀಕರಣಕ್ಕೆ ಕಾರಣವಾಯಿತು. ಇದು ನನಗೆ ಬಹಳ ಪ್ರಿಯವಾದ ವಿಷಯವಾಗಿದ್ದು, ಅದರ ಬಗ್ಗೆ ನಾನು ವ್ಯಾಪಕವಾಗಿ ಬರೆದಿದ್ದೇನೆ. ಅಕ್ಟೋಬರ್ ತಿಂಗಳಲ್ಲಿ ನಾನು ರೋಮ್ ಲಾ ಸಪಿಯೆಂಜಾ ವಿಶ್ವವಿದ್ಯಾಲಯದಲ್ಲಿ Sacred Poetry ಸಮಾವೇಶದ ಎರಡನೇ ಸಭೆಯನ್ನು ಆಯೋಜಿಸುತ್ತಿದ್ದೇನೆ.

◆ **ಆಧುನಿಕ ಇಟಾಲಿಯನ್ ಕಾವ್ಯ ಬೆಳೆದು ಬಂದ ಬಗೆ ಹೇಗೆ? ಈಗ ನಿಮ್ಮಲ್ಲಿ ಹೊಸ ಪ್ರಯೋಗಶೀಲ ದನಿಗಳು ಕೇಳಿ ಬರುತ್ತಿವೆಯೆ?**

ಇಟಲಿಯಲ್ಲಿ ಸಂಪ್ರದಾಯಕ್ಕೆ ಕಟ್ಟು ಬಿದ್ದ ಕೆಲವು ಹೆಸರುವಾಸಿ ಕವಿಗಳಿದ್ದಾರೆ. ಮತ್ತವರಿಗೆ ದೊಡ್ಡ ಸಂಖ್ಯೆಯ ಅಭಿಮಾನಿ ಬಳಗವೂ ಇದೆ. ಇದರ ಮಧ್ಯೆ 1960ರ ದಶಕದಲ್ಲಿ ಹೊಸ ಕಾವ್ಯ ಪ್ರಯೋಗಗಳ ಬಗ್ಗೆ ತೀವ್ರವಾದ ಉಮೇದು ಹುಟ್ಟಿಕೊಂಡಿತ್ತು.ಇದು Gruppo 63 ಎಂದೇ ಪ್ರಸಿದ್ಧ. ಅದನ್ನು ಅನುಸರಿಸುವ ಕೆಲವು ಕವಿಗಳು ಈಗಲೂ ಇದ್ದಾರೆ. ಇವತ್ತಿನ ಯುವ ಕವಿಗಳ ಕಾವ್ಯವು ಈ ಎರಡು ಗುಂಪುಗಳ ಮಧ್ಯೆ ಹಂಚಿ ಹೋಗಿದೆ. ಕೆಲವರು ಮೊಂತಾಲೆ, ಕ್ವಾಸಿಮೋದೊ ಮತ್ತು ಉಂಗರೆತ್ತಿಯಂತಹ ಕ್ಲಾಸಿಕ್ ಭಾವ ಕವಿಗಳ ಪರಂಪರೆಯಲ್ಲಿದ್ದಾರೆ. ಒಂದು ರೀತಿಯಲ್ಲಿ ಇವರದು ಭಾವಗೀತಾತ್ಮಕ ಶೈಲಿ. ಇನ್ನು ಪ್ರಯೋಗಶೀಲ ಕಾವ್ಯದ ಕಡೆ ಹೊರಳಿದವರು ಮುಕ್ತ ಛಂದಸ್ಸಿನ ಕಡೆಗೆ ಗಮನ ಕೊಟ್ಟರು. ಪದ್ಯ ಮತ್ತು ಗದ್ಯವನ್ನು ಕಸಿಮಾಡಿ, ಕಾವ್ಯ ಕಥನದ ದಾರಿಯಲ್ಲಿ ನಡೆಯುತ್ತಿದ್ದಾರೆ. ಇವರು ಹೆಚ್ಚಾಗಿ ಉತ್ತರ ಇಟಲಿಯವರು. ಸಾಂಪ್ರದಾಯಿಕ ಭಾವ ಕವಿಗಳು ದಕ್ಷಿಣದಲ್ಲಿ ಕಂಡುಬರುತ್ತಾರೆ

◆ **'In Life, Ten Important Things' ಈ ಪುಸ್ತಕ ಬರೆಯಲು ನಿಮಗಿದ್ದ ಒತ್ತಾಸೆ ಏನು? ಮಕ್ಕಳಿಗಾಗಿ ಸಾಹಿತ್ಯ ಬರೆಯುವುದು ನಿಮಗೆ ಯಾಕೆ ಮುಖ್ಯ ಅನ್ನಿಸಿತು?**

ನಾನು ಈ ಪುಸ್ತಕವನ್ನು ವಿಶ್ವದ ಎಲ್ಲಾ ಮಕ್ಕಳ ಸಲುವಾಗಿ ಬರೆದಿದ್ದೇನೆ. ಮಹಾನುಭಾವರು ಹುಟ್ಟು ಹಾಕಿದ ಮತ ಪಂಥಗಳನ್ನು ಮತ್ತು ಜನಸಾಮಾನ್ಯರ ಜಾನಪದ ತಿಳಿವಳಿಕೆಯನ್ನು ವಿಶೇಷವಾಗಿ ಅಧ್ಯಯನ ಮಾಡುತ್ತಿದ್ದ ದಿನಗಳಲ್ಲಿ, ನಾನು ಕಲಿತ ಎಲ್ಲವನ್ನೂ ಈ ಪುಸ್ತಕದ ಹತ್ತು ಪಾಠಗಳಲ್ಲಿ ವ್ಯಕ್ತಪಡಿಸಲು ಪ್ರಯತ್ನಿಸಿದೆ. ಒಬ್ಬ ಶಿಕ್ಷಕಿಯಾಗಿ, ಬೆಳೆದ ದೊಡ್ಡವರಿಗಿಂತ ಮಕ್ಕಳನ್ನು ತಿದ್ದುವುದು ಒಳ್ಳೆಯದು ಅನ್ನುತ್ತೆ. ಹೊಸ ತಲೆಮಾರಿಗೆ ಸರಿಯಾದ ಶಿಕ್ಷಣ ನೀಡುವ ಮೂಲಕ ಜಗತ್ತನ್ನು ಬದಲಾಯಿಸಬಹುದು ಎಂದು ನಾನು ನಂಬುತ್ತೇನೆ. ಇವತ್ತಿನ ಆಧುನಿಕ ಬದುಕಿನ ಒತ್ತಡದಲ್ಲಿ,ನಮ್ಮಲ್ಲಿ ಉಳಿದಿರಬಹುದಾದ ಅಲ್ಪಸ್ವಲ್ಪ ಮುಗ್ಧತೆಯನ್ನು ಪರೀಕ್ಷಿಸಿಕೊಳ್ಳಲಾದರೂ, ಸಾಹಿತಿ ಎನಿಸಿಕೊಂಡವನು ಒಮ್ಮೆಯಾದರೂ ಮಕ್ಕಳ ಪುಸ್ತಕ ಬರೆಯಬೇಕು. ●